<u>ಕರ್ನಾಟಕ ಲೋಕಾಯುಕ್ತ</u>

ನಂ:ಕಂ.ಲೋಕ್.ಬಿಸಿಡಿ 2513/2018

ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:23/11/2018

**ನೊಟೀಸು**

**ವಿಷಯ: ಹೆಚ್.ಎಸ್.ದೊರೈಸ್ವಾಮಿ ಎಂಬುವವರು ನಮ್ಮ ಸಂಸ್ಥೆಯಲ್ಲಿ ನೀಡಿರುವ ದೂರಿನ ಕುರಿತು.**

--

ಮೇಲ್ಕಂಡ ವಿಷಯಕ್ಕೆ ಸಂಬಂದಪಟ್ಟಂತೆ ತಮಗೆ ಈ ಮೂಲಕ ಗೌರವಾನ್ವಿತ ಲೋಕಾಯುಕ್ತರವರ ಆದೇಶದಂತೆ ತಮಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಗೌರವಾನ್ವಿತ ಲೋಕಾಯುಕ್ತರವರು **ಸೋಂಪುರ ಕೆರೆಗೆ** ಸಂಬಂದಪಟ್ಟಂತೆ ದಿನಾಂಕ: **15-11-2018 ರಂದು ಹೊರಡಿಸಿರುವ ಆದೇಶವನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದ್ದು, ಆದೇಶದಲ್ಲಿ ತಿಳಿಸಿರುವಂತೆ ಪ್ರಸ್ತುತ ವರದಿಯೊಂದಿಗೆ ದಿನಾಂಕ:<u>19-03-2019</u> ರಂದು 3-00 ಗಂಟೆಗೆ ಖುದ್ದು ಗೌರವಾನ್ವಿತ ಲೋಕಾಯುಕ್ತರವರ ಮುಂದೆ ಹಾಜರಾಗತಕ್ಕದ್ದು.**

ಗೌರವಾನ್ವಿತ ಲೋಕಾಯುಕ್ತರವರ ಆದೇಶದನ್ವಯ
[signature] 21/11
ಅಪರ ನಿಭಂದಕರು ವಿಚಾರಣೆಗಳು-1
ಕರ್ನಾಟಕ ಲೋಕಾಯುಕ್ತ,ಬೆಂಗಳೂರು

1) Sri.Suresh.N.R, C.E.O., Namma Bangalore foundation, 2nd floor, No54, Rockline centre, Richmond Road, Bangalore.

2) sri. Jaganath rao, Deputy conservator of Forest, BBMP, Bangalore

3) The Sr.Environmental Officer, Karnataka State Pollution Control Board, Church street Bangalore. ನಿಸರ್ಗ ಭವನ, ಸಾದಿಕ್ (Asst ದಿನೇಶ್ RO)

4) Sri. Prakash, Assistant Executive Engineer,, B W S S B, Cauvery Bhavan, Bangalore

5) Sri. Sathish, Chief Engineer(Lakes), BBMP, Bangalore.

6) The Tahsildar, Bangalore Bangalore South Taluk, Bangalore

7) The Assistant Director of Land Records, Bangalore South Taluk, Bangalore.

8) Sri. Natarajan, The Residents Welfare Association , Banashankari 6th stage, Bangalore.

## KARNATAKA LOKAYUKTA, BENGALURU

No.Compt/LOK/BCD-2513/2018/ARE-1 Date : 15.11.2018

## O R D E R

On behalf of the complainant Sri H.S.Doreswamy, Sri Suresh.N.R. is present. Sri T.Jaganath Rao, Deputy Conservator of Forest is present on behalf of the Commissioner, BBMP, Bengaluru and filed the Status Report dated 3.11.2018. On behalf of BWSSB Sri Prakash, Assistant Executive Engineer is present.

2) On behalf of the Karnataka State Pollution Control Board Sri Sadiq Ahmed, Senior Environmental Officer is present along with Sri R.V.Bhat, Law Officer, and filed the Status Report dated 13.11.2018. It is useful to extract the relevant portion of the Status Report which reads as hereunder –

"ಗೌರವಾನ್ವಿತ ಲೋಕಾಯುಕ್ತರು ದಿನಾಂಕ: 11.09.2018ರಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಎದುರುದಾರ-2) ರವರಿಗೆ ನೀಡಿದ ನಿರ್ಧೇಶನದಂತೆ ಮಂಡಳಿಯ ಅಧಿಕಾರಿಗಳು ಸಂಬಂಧಪಟ್ಟ ಕೆರೆ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಿರುತ್ತದೆ. ಸದರಿ ವರದಿಯನ್ನು ಮಾನ್ಯರವರಲ್ಲಿ ಸಲ್ಲಿಸಲಾಗುತ್ತಿದೆ.

ಪ್ರಾದೇಶಿಕ ಅಧಿಕಾರಿ ರಾಜರಾಜೇಶ್ವರಿನಗರ ರವರು ದಿನಾಂಕ. 21.09.2018ರಂದು ಈ ಕೆಳಗಿನ ಕೆರೆಗಳನ್ನು ಪರಿವೀಕ್ಷಣೆ ಮಾಡಿರುತ್ತಾರೆ.

1. <u>ಸುಬ್ರಮಣ್ಯ ಕೆರೆ:</u> ಈ ಕೆರೆಯು ಬೆಂಗಳೂರಿನ ದಕ್ಷಿಣ ತಾಲ್ಲೂಕು, ಉತ್ತರಳ್ಳಿ ಹೋಬಳಿ, ಸುಬ್ರಮಣ್ಯಪುರದಲ್ಲಿರುತ್ತದೆ.
    - ಈ ಕೆರೆಯು ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುತ್ತದೆ. ಇವರು ಕೆರೆಯನ್ನು ಪುನರ್‌ಚೇತನಗೊಳಿಸುತ್ತಿದ್ದಾರೆ.
    - ಈ ಕೆರೆಯ ಅಚ್ಚುಕಟ್ಟಿನಲ್ಲಿ ಕನಕ ಲೇಔಟ್, 3ನೇ ಹಂತ, ಗುಬ್ಬಾಳಾಲ, ಮತ್ತು ಸುಬ್ರಮಣ್ಯಪುರ ಸೇರಿರುತ್ತದೆ.
    - ಈ ಕೆರೆಯ ಸುತ್ತ ಸುಬ್ರಮಣ್ಯಪುರ, ವಿನಾಯಕ ನಗರ, ಬಾಲಾಜಿ ಲೇಔಟ್, ಭುವನೇಶ್ವರಿನಗರ, ರಾಮಚಂದ್ರಪ್ಪ ಲೇಔಟ್, ಹಾಗೂ ಕೊಳಚೆ ನಿರ್ಮೂಲನಾ ಮಂಡಳಿಯವರು ಕೆಲವು ಅಪಾರ್ಟ್‌ಮೆಂಟುಗಳನ್ನು ಕಟ್ಟಿರುತ್ತಾರೆ.
    - ಈ ಪ್ರದೇಶದಿಂದ ಬರುವ ರೊಚ್ಚುನೀರನ್ನು ಕೆರೆಯ ಕೆಳಭಾಗಕ್ಕೆ ಬಿಡುತ್ತಿದ್ದಾರೆ.

2. <u>ಗುಬ್ಬಲಾಲ ಟ್ಯಾಂಕ್:</u> ಈ ಕೆರೆಯು ಅರಣ್ಯ ಇಲಾಖೆಯ ಅಧೀನದಲ್ಲಿದೆ. ಸದ್ಯಕ್ಕೆ ಈ ಕೆರೆಯ ನೀರನ್ನು ಯಾವುದಕ್ಕೂ ಉಪಯೋಗಿಸುತ್ತಿಲ್ಲ.
    - ಕೆರೆಯ ಸುತ್ತ ಬೇಲಿಯನ್ನು ಹಾಕಲಾಗಿದೆ ಇದರಲ್ಲಿ ಸ್ವಲ್ಪ ಭಾಗ ಕಿತ್ತುಹೋಗಿರುತ್ತದೆ. ಆದರೆ ಕೆರೆಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಆದ್ದರಿಂದ ಕೆರೆಯಲ್ಲಿ ಕಳೆಬೆಳೆದಿದೆ ಹಾಗೂ ಸುತ್ತಲೂ ಗಿಡಘಂಟಗಳು ಬೆಳೆದಿರುತ್ತದೆ.
    - ಕೆರೆಗೆ ಘನ ತ್ಯಾಜ್ಯವನ್ನು ಸುರಿದಿರುವುದು ಕಂಡುಬಂದಿರುತ್ತದೆ.
    - ಈ ಕೆರೆಯ ಮೇಲ್ಭಾಗದಲ್ಲಿ ರಾಘವನ ಹಳ್ಳಿ, ಗುಬ್ಬಲಾಲ, ಸುಬ್ರಮಣ್ಯಪುರದ ಸ್ವಲ್ಪ ಭಾಗ, ಬಾಲಾಜಿ ಲೇಔಟ್, ಮತ್ತು ರಾಘವೇಂದ್ರ ಲೇಔಟ್‌ಗಳು ಸ್ಥಾಪಿತಗೊಂಡಿದೆ.
    - ಮೇಲೆ ತಿಳಿಸಿದ ಪ್ರದೇಶದಿಂದ ಬರುವ ರೊಚ್ಚುನೀರು ಚರಂಡಿಗಳ ಮೂಲಕ ಕೆರೆಯನ್ನು ಸೇರುತ್ತಿದೆ. ಇದರಿಂದಾಗಿ ಕೆರೆಯ ನೀರು ಕಲುಷಿತವಾಗುತ್ತಿದೆ.

3. <u>ತಲಘಟ್ಟಪುರ ಕೆರೆ:</u> ಈ ಕೆರೆಯು ಬಿಡಿಎ ವ್ಯಾಪ್ತಿಗೆ ಬರುತ್ತದೆ. ಆದರೆ ಸರಿಯಾಗಿ ನಿರ್ವಹಣೆ ಮಾಡಿರುವುದಿಲ್ಲ.
    - ಈ ಕೆರೆಯ ಸುತ್ತ ಬೇಲಿಯನ್ನು ಹಾಕಿರುತ್ತಾರೆ. ಆದರೆ ಸ್ವಲ್ಪಭಾಗ ಕಿತ್ತುಹೋಗಿರುತ್ತದೆ.
    - ಕೆರೆಯ ಸುತ್ತ ಘನತ್ಯಾಜ್ಯವನ್ನು ಸುರಿದಿರುವುದು ಕಂಡುಬಂದಿರುತ್ತದೆ.

- ತಲಘಟ್ಟಪುರ, ಗಾಣಿಗೆರ ಪಾಳ್ಯ ಮತ್ತು ಆದರ್ಶ್ ಲೇಔಟ್‌ಗಳಿಂದ ರೊಚ್ಚುನೀರು ಕೆರೆಯನ್ನು ಸೇರುತ್ತಿದೆ. ಇದರಿಂದಾಗಿ ಕೆರೆಯ ನೀರಿನಲ್ಲಿ ಜಲಸಸ್ಯಗಳು ಬೆಳೆದಿರುತ್ತದೆ.
- ಕೆರೆಯ ಪಕ್ಕದಲ್ಲಿ ಕಲ್ಯಾಣಿಯನ್ನು ಸ್ಥಾಪಿಸಲಾಗಿದೆ. ಆದರೆ ಈ ಕಲ್ಯಾಣಿಯು ಗಿಡಘಂಟೆಗಳಿಂದ ಮುಚ್ಚಿಹೋಗಿವೆ.

4. **<u>ಸೋಂಪುರ ಕೆರೆ:</u>** ಈ ಕೆರೆಯು ಸೋಂಪುರ ಹಳ್ಳಿಯ ಬನಶಂಕರಿ 6ನೇ ಹಂತದಲ್ಲಿದೆ. ಈ ಕೆರೆಯು ಬಿಡಿಎ ಸಂಸ್ಥೆಯ ಅಧೀನದಲ್ಲಿರುತ್ತದೆ.

   - ಲಿಂಗದಹಳ್ಳಿ ಮತ್ತು ಸೋಂಪುರ ಹಳ್ಳಿಗಳು ಈ ಕೆರೆಯ ಅಚ್ಚುಕಟ್ಟಿನಲ್ಲಿ ಬರುತ್ತದೆ.
   - ಈ ಕೆರೆಯನ್ನು ಬಿಡಿಎ ಅವರು ಅಭಿವೃದ್ಧಿ ಪಡಿಸಿದ್ದಾರೆ. ಆದರೆ ಇದನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಆದ ಕಾರಣ ಕೆರೆಯ ಸುತ್ತ ಗಿಡಘಂಟೆಗಳು ಬೆಳೆದುಕೊಂಡಿದೆ.
   - ಕೆರೆಯ ಸುತ್ತ ಬೇಲಿ ಹಾಕಲಾಗಿದೆ. ಆದರೆ ಕೆಲವು ಭಾಗದಲ್ಲಿ ಬೇಲಿಯು ಕಿತ್ತುಹೋಗಿರುತ್ತದೆ. ಕೆರೆಯ ಸುತ್ತ ಕಾಲು ದಾರಿಯನ್ನು ಮಾಡಲಾಗಿದೆ.
   - ಈ ಕೆರೆಯ ನೀರನ್ನು ಯಾವುದೇ ಕಾರ್ಯಕ್ಕೆ ಉಪಯೋಗಿಸುತ್ತಿಲ್ಲ. ಈ ಮೊದಲು ಲಿಂಗದಹಳ್ಳಿಯಲ್ಲಿ ಬಿಬಿಎಂಪಿ ನವರು ಸ್ಥಾಪಿಸಲಾಗಿರುವ ಘನ ತ್ಯಾಜ್ಯ ನಿರ್ವಹಣೆಯ ಸ್ಥಳದಿಂದ ರೊಚ್ಚುನೀರು ಕೆರೆಗೆ ಸೇರುತ್ತಿತ್ತು ಆದರೆ ಈಗ ಪ್ರದೇಶದಿಂದ ಯಾವುದೇ ರೊಚ್ಚು ನೀರು ಕೆರೆಗೆ ಸೇರುತ್ತಿಲ್ಲ. ಬಿಬಿಎಂಪಿ ನವರು ರೊಚ್ಚುನೀರನ್ನು ಗೊಬ್ಬರ ಮಾಡಲು ಬಳಸುತ್ತಿದ್ದಾರೆ. ಉಳಿದ ರೊಚ್ಚು ನೀರನ್ನು ಮೈಲಸಂದ್ರ ಶುದ್ಧೀಕರಣ ಘಟಕಕ್ಕೆ ರವಾನಿಸುತ್ತಿದ್ದಾರೆ.
   - ಮಳೆಗಾಲದಲ್ಲಿ ಮಳೆಯ ನೀರು ಮಾತ್ರ ಸೇರುತ್ತಿದೆ.

ಮಂಡಳಿಯು ಬೆಂಗಳೂರಿನ ಮತ್ತು ಸುತ್ತಮುತ್ತಲಿನ **<u>75 ಕೆರೆಗಳ</u>** ನೀರನ್ನು ಕಾಲಕಾಲಕ್ಕೆ ಸಂಗ್ರಹಿಸಿ ವಿಶ್ಲೇಶಿಸಿರುತ್ತದೆ. ಇವುಗಳ ವಿಶ್ಲೇಷಣೆಯ ಪ್ರಕಾರ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ವರ್ಗೀಕರಣದನ್ವಯ 25 ಕೆರೆಗಳು 'ಡಿ' ವರ್ಗಕ್ಕೂ 50 ಕೆರೆಗಳು 'ಇ' ವರ್ಗಕ್ಕೆ ಸೇರಿವೆ. ಈ ಕೆರೆಗಳ ಗುಣಮಟ್ಟ ಕೆಟ್ಟಿರುವುದಕ್ಕೆ ಕಾರಣ ಸುತ್ತಮುತ್ತಲಿನ ಒಳಚರಂಡಿಗಳಿಲ್ಲದ ಪ್ರದೇಶಗಳ ಗೃಹ ರೊಚ್ಚುನೀರು ರಾಜಕಾಲುವೆಗಳಲ್ಲಿ ಹರಿದು ನೇರವಾಗಿ ಕೆರೆಯನ್ನು ಸೇರುತ್ತಿದೆ. ಇದಕ್ಕೆ ಸೂಕ್ತ ಕ್ರಮ (ಯು.ಜಿ.ಡಿ ಮತ್ತು ಎಸ್.ಟಿ.ಪಿ) ಕೈಗೊಳ್ಳುವಂತೆ ಸಂಬಂಧಿಸಿದ ಇಲಾಖೆಗಳಿಗೆ (ಬಿಬಿಎಂಪಿ, ಬಿಡಬ್ಲ್ಯೂ.ಎಸ್.ಎಸ್.ಬಿ, ಬಿಡಿಎ) ಮಂಡಳಿಯಿಂದ ನಿರ್ದೇಶನ ನೀಡಲಾಗಿದೆ. ಕೆರೆ ಪ್ರದೇಶದ ಅತಿಕ್ರಮಣ ಮಂಡಳಿಯ ವ್ಯಾಪ್ತಿಗೆ ಬರುವುದಿಲ್ಲ.

ಕಲಂ: 15 BWSSB 1964 ರಂತೆ ರೊಚ್ಚು ನೀರನ್ನು ಸಂಸ್ಕರಣೆ ಮಾಡಿ ಸರಿಯಾದ ನೀರನ್ನು ಸಾರ್ವಜನಿಕರಿಗೆ ನೀಡುವ ಕರ್ತವ್ಯವು

BWSSB ಸಂಸ್ಥೆಯ ವ್ಯಾಪ್ತಿಗೆ ಬರುತ್ತಿದ್ದು ಈ ಬಗ್ಗೆ ಮಂಡಳಿಯಿಂದಲೂ ಸಾಕಷ್ಟು ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಅದರಂತೆ ಕಲಂ 63 ಹಾಗೂ 64 ರಂತೆ ರೊಚ್ಚು ನೀರು ಸಂಸ್ಕರಣಾ ಘಟಕಗಳ ಸ್ಥಾಪನೆ ಮಾಡುವ ಜವಾಬ್ಧಾರಿಯು BWSSB ಸಂಸ್ಥೆಯ ಮುಖ್ಯ ಕರ್ತವ್ಯವಾಗಿರುತ್ತದೆ.

ಘನತ್ಯಾಜ್ಯ ನಿರ್ವಹಣೆ ನಿಯಮ 2016ರ ಕಲಂ 15ರ ಅನ್ವಯ ಸ್ಥಳೀಯ ಸಂಸ್ಥೆಗಳ ( ಬಿಬಿಎಂಪಿ ) ಘನತ್ಯಾಜ್ಯ ನಿರ್ವಹಣೆ ಮಾಡುವ ಜವಾಬ್ದಾರಿಯನ್ನು ಹೊಂದಿದ್ದು ಹಾಗೂ ಕಟ್ಟಡ ತ್ಯಾಜ್ಯ ನಿರ್ವಹಣೆ ನಿಯಮಗಳಂತೆ ನಿರ್ವಹಣಾ ಜವಾಬ್ದಾರಿಯನ್ನು ಬಿಬಿಎಂಪಿ ಹೊಂದಿದ್ದು ಈ ಬಗ್ಗೆ ಮಂಡಳಿಯಿಂದ ಬಿಬಿಎಂಪಿಗೆ ನಿರ್ದೇಶನಗಳನ್ನು ಕಾಲಕಾಲಕ್ಕೆ ನೀಡಲಾಗಿರುತ್ತದೆ.

ಆದ್ದರಿಂದ ಗೌರವಾನ್ವಿತ ಲೋಕಾಯುಕ್ತರಲ್ಲಿ ಈ ಸಂಸ್ಥೆಗಳಾದ ಬಿಬಿಎಂಪಿ ಮತ್ತು ಬಿಡಬ್ಲ್ಯೂಎಸ್‌ಎಸ್‌ಬಿಗಳಿಗೆ ಕೆರೆಗೆ ರೊಚ್ಚುನೀರು ಸೇರುವುದನ್ನು ತಡೆಯುವ ಕುರಿತು ಹಾಗೂ ಘನ ತ್ಯಾಜ್ಯಗಳನ್ನು ಸೂಕ್ತ ನಿರ್ವಹಣೆ ಕುರಿತು ಕೆರೆ ಅಥವಾ ನದಿಗೆ ಸೇರದಂತೆ ಸೂಕ್ತ ನಿರ್ದೇಶನ ನೀಡುವ ಬಗ್ಗೆ ಮಂಡಳಿಯ ಪ್ರಾರ್ಥನೆ ಇರುತ್ತದೆ."

3) It is also useful to extract the relevant portion of the letter dated 3.11.2018, submitted by Sri T.Jaganath Rao, Deputy Conservator of Forest, BBMP, Bengaluru which reads as follows –

"ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಸೋಂಪುರ ಗ್ರಾಮದ ಸರ್ವೆ ನಂ 11 & 12 ರಲ್ಲಿರುವ ಸೋಂಪುರ ಕೆರೆಯನ್ನು ಅಭಿವೃದ್ಧಿಪಡಿಸಿ, ನಿರ್ವಹಣೆ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿದ್ದು, ಮಾನ್ಯ ಲೋಕಾಯುಕ್ತ, ಕರ್ನಾಟಕ ಸರ್ಕಾರ ರವರು ದಿನಾಂಕ: 11.09.2018 ರಂದು ಸದರಿ ಕೆರೆಯ ಬಗ್ಗೆ ವಿಚಾರಣೆ ಕೈಗೊಂಡು ಸೋಂಪುರ ಸರ್ಕಾರಿ ಕೆರೆಯಲ್ಲಿರುವ ಒತ್ತುವರಿಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಉಲ್ಲೇಖ (1) ರಲ್ಲಿ ಆದೇಶ ಹೊರಡಿಸಿರುತ್ತಾರೆ.

ಆದ್ದರಿಂದ, ತಾವುಗಳು ಬೆಂಗಳೂರು ದಕ್ಷಿಣ ತಾಲ್ಲೂಕು ಸೋಂಪುರ ಗ್ರಾಮದ ಸರ್ವೆ ನಂ: 11 & 12 ರಲ್ಲಿರುವ ಸೋಂಪುರ ಕೆರೆಯಲ್ಲಿರುವ ಅನಧಿಕೃತ ಒತ್ತುವರಿಗಳನ್ನು

ಸ್ಥಳದ ಮೇಲೆ ಗುರುತಿಸಿ, ಸದರಿ ಅನಧಿಕೃತ ಒತ್ತುವರಿಗಳನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಂಡು, ಸದರಿ ವಿಷಯದ ಬಗ್ಗೆ ವರದಿಯನ್ನು ಮಾನ್ಯ ಲೋಕಾಯುಕ್ತ, ಕರ್ನಾಟಕ ಸರ್ಕಾರ ರವರಿಗೆ ಸಲ್ಲಿಸಲು ತಮ್ಮನ್ನು ಕೋರಿದೆ. ಈ ಪತ್ರದೊಂದಿಗೆ ಉಲ್ಲೇಖದ ಆದೇಶದ ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ."

4) It is pointed out by Sri T.Jaganath Rao, that the Sompura lake is developed by the BDA and the BBMP will continue to maintain the said lake. He further submitted that the Sompura lake has been handed over by the BDA to the BBMP i.e., during June 2017. It is pointed by the complainant that a small portion of the lake area has been encroached. In the light of what is stated above, it would be in the interest of justice to implead the concerned Tahsildar and the Assistant Director of Land Records as respondents and issue notices to them.

5) The Tahsildar is directed to get the lake area surveyed and submit the report by the next date of hearing. The Assistant Director of Land Records is directed to co-operate with the Tahsildar concerned and get the lake area surveyed and submit the report by the next date of hearing.

6) Sri Natarajan, representing the Residents Welfare Association, Banashankari 6th Stage, Bengaluru has requested

for rejuvenation of the lake by the authorities concerned. It is further pointed out that the condition of the lake is required to be improved and maintained properly. He pointed out, because of the pumping of the waste from Lingadeeranahalli Waste Processing Plant to the SWD which enters in to the lake, the lake is polluted. In view of the above submission made, I am of the view, in the interest of justice to permit him to give representation to the respondents i.e., BBMP, KSPCB and BWSSB. The authorities concerned shall examine the grievances made and submit a Status Report with regard to the steps taken by them, by the next date of hearing.

Communicate this order to all the parties concerned. List this case on **19th March, 2019 at 3.00 p.m.**

(**Justice P.Vishwanatha Shetty**)
Lokayukta
State of Karnataka

*vl

7) Additional Registrar of Enq.1